

# ಕುಳ್ಳನಿಗೆ ವಿಶ್ವ ದಾಖಲೆ ಕಿರೀಟ!





ಈತನ ಹೆಸರು ಬಹದ್ದೂರ್ ಡಾಂಗಿ. ಬರೋಬ್ಬರಿ 56 ಸೆಂಟಿಮೀಟರ್ ಉದ್ದವಿರುವ ಈತ ಪ್ರಪಂಚದ ಅತೀ ಕುಳ್ಳನೆಯ ವ್ಯಕ್ತಿ! ನೇಪಾಳದ ರೀಮುಖೋಲಿ ಎಂಬ ಪುಟ್ಟ ಗ್ರಾಮ ಇವನ ಸ್ವಂತ ಊರು.

ಈತನಿಗೀಗ 72 ವರ್ಷ. ಸುತ್ತಮುತ್ತಲಿನ ಜನರು ಕುಳ್ಳ ಎಂದು ರೇಗಿಸುತ್ತಿದ್ದರಿಂದ ಇವನು ರೋಸಿಹೋಗಿದ್ದನಂತೆ. 'ಇಷ್ಟು ದಿನ ಕುಳ್ಳನೆಂಬ ಕೀಳರಿಮೆಯಿಂದಲೇ ಜೀವಿಸಿದೆ. ಬದುಕುವುದೇ ಅಸಹನೀಯ ಎನ್ನಿಸಿತ್ತು. ಆದರೀಗ ವಿಶ್ವದಾಖಲೆಯ ಪಟ್ಟ ಸಿಕ್ಕಿರುವುದು ಹೊಸ ಚೈತನ್ಯ ಬಂದಂತಾಗಿದೆ' ಎನ್ನುತ್ತಾನಿವನು.

ಈ ಹಿಂದೆ ಅತೀ ಕುಳ್ಳನೆಂಬ ಖ್ಯಾತಿಯನ್ನು ಭಾರತದ ಗುಲ್ ಮೊಹಮ್ಮದ್ (57 ಸೆಂಟಿಮೀಟರ್ ಉದ್ದ) ಪಡೆದಿದ್ದ. ಇವನ ನಿಧನ ನಂತರ ನಂತರ ಫಿಲಿಪಿನೋ ಜುನ್ರೆ ಬಾಲವಿಂಗನಿಗೆ(59.93 ಸೆಂಟಿಮೀಟರ್) ಈ ಪಟ್ಟ ಒಲಿದಿತ್ತು. ಇದೀಗ 57 ವರ್ಷದ ಗಿನ್ನಿಸ್ ಇತಿಹಾಸದ ಎಲ್ಲ ದಾಖಲೆಗಳನ್ನು ಮುರಿದು ವಿಶ್ವದಾಖಲೆಯ ಮನ್ನಣೆಯನ್ನು ಈತ ಮುಡಿಗೇರಿಸಿಕೊಂಡಿದ್ದಾನೆ.

ಇವನ ತಲೆ ಸಹಜ ಬೆಳವಣಿಗೆಯನ್ನು ಹೊಂದಿದ್ದು, ದೇಹ ಮಾತ್ರ ಬೆಳೆದಿಲ್ಲ. ಇದಕ್ಕೆ ಕಾರಣ ಮಗು ಗರ್ಭದಲ್ಲಿರುವಾಗಲೇ ಕಾಣಿಸಿಕೊಳ್ಳುವ 'ಪ್ರೈಮೊರ್ಡಿಯಲ್ಲ ಡ್ವಾರ್ಫಿಸಮ್' ಎಂಬ ಕಾಯಿಲೆ.

ಅಂದ ಹಾಗೆ ಇವನಿಗೆ ಐದು ಜನ ಸಹೋದರರಿದ್ದು ಎಲ್ಲರೂ ಸಹಜ ಬೆಳವಣಿಗೆಯನ್ನು ಹೊಂದಿದ್ದಾರೆ. 'ಕುಳ್ಳರೆಂದು ನಾಚಿಕೆ ಪಡಬೇಡಿ. ಸಾಧನೆಯೇ ನಿಮ್ಮ ಗುರಿಯಾಗಬೇಕು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಿರಲಿ' ಎಂಬ ಸಂದೇಶವನ್ನು ನೀಡುತ್ತಾನೆ.

■ ಸುಭಾಸ ಯಾದವಾಡ